# ಆದಿವಾಸಿ, ದಲಿತ, ಹಿಂದುಳಿದ ಅಲ್ಪಸಂಖ್ಯಾತರೆಲ್ಲರೂ ಒಗ್ಗೂಡೋಣ! ಭಜರಂಗದಳ, ಶ್ರೀರಾಮಸೇನೆಯ ನಾಯಕರ ಫ್ಯಾಸಿಸ್ಟ್ ಗೂಂಡಾಗಿರಿಯನ್ನು ಎದಿರೇಟು ನೀಡುತ್ತಾ ತಡೆಗಟ್ಟೋಣ!

**ಆತ್ಮೀಯ ದಕ್ಷಿಣ ಕನ್ನಡ, ಉಡುಪಿಯ ಆದಿವಾಸಿ, ದಲಿತ, ಹಿಂದುಳಿದ ಅಲ್ಪಸಂಖ್ಯಾತರೆ, ಯುವಕ/ಯುವತಿಯರೆ, ವಿದ್ಯಾರ್ಥಿ/ವಿದ್ಯಾರ್ಥಿನಿಯರೆ, ಪ್ರಜಾತಂತ್ರವಾದಿಗಳೆ,**

ಹಿಂದೂ, ಮುಸಲ್ಮಾನ, ಕ್ರೈಸ್ತ, ಜೈನ ಹೀಗೆ ಹಲವು ಧರ್ಮಗಳಲ್ಲಿ ನಂಬಿಕೆಯಿರುವ ತುಳು, ಕನ್ನಡ, ಕೊಂಕಣಿ, ಬ್ಯಾರಿ, ಮಲೆಯಾಳಂ, ತಮಿಳು ಹೀಗೆ ಹಲವು ಭಾಷೆಗಳ ಸಂಗಮವಾಗಿರುವ ಪ್ರದೇಶಗಳಲ್ಲಿ ನೆಲೆಸಿರುವ ಶಾಂತಿ ಸೌಹಾರ್ದತೆ ಸಮಾನತೆಯನ್ನು ಬಯಸುವ ನಾವಿಂದು ಹಲವಾರು ಸಾಮಾಜಿಕ ಸಂಕಷ್ಟಗಳಿಗೆ ಈಡಾಗಿದ್ದೇವೆ. ನಮ್ಮೆಲ್ಲರ ಬದುಕೂ ಅತಂತ್ರವಾಗಿದೆ. ಭವಿಷ್ಯದ ಬದುಕಿನ ಭರವಸೆ ಇಲ್ಲದಂತಾಗಿದೆ. ನಮ್ಮ ನಾಡನ್ನೂ ಹಾಗೂ ಜನರನ್ನು ನುಂಗಿ ಹೊಸಕಿ ಹಾಕುತ್ತಿರುವ ನಾಗಾರ್ಜುನ ಥರ್ಮಲ್ ವಿದ್ಯುತ್ ಸ್ಥಾವರ, ಮಂಗಳೂರು ವಿಶೇಷ ಆರ್ಥಿಕ ವಲಯದಂತಹ ವಿದೇಶೀ ಹಾಗೂ ಸ್ವದೇಶಿ ಲೂಟಿಕೋರರ ಯೋಜನೆಗಳು, ಬದುಕಿಗೆ ಆಸರೆಯಾಗಬೇಕಿದ್ದ ಭೂಮಿಯ ಹಿಡಿತ ಜನರ ಕೈಯಲ್ಲಿ ಇಲ್ಲದಿರುವುದು, ಇರುವ ಭೂಮಿಗೆ ಹಕ್ಕುಪತ್ರಗಳೇ ಸಿಕ್ಕಿಲ್ಲ. ಉದ್ಯೋಗದ ಅವಕಾಶಗಳನ್ನು ಸೃಷ್ಟಿಸುವ ಕೈಗಾರೀಕರಣ ಇಲ್ಲದೆ ನಿರುದ್ಯೋಗ ಸಮಸ್ಯೆ ದಿನೇದಿನೇ ಹೆಚ್ಚಳವಾಗುತ್ತಿರುವುದು ಬದುಕಿಗೆ ಮೂಲ ಇಲ್ಲದೆ ಮುಂಬಯಿ ಹೈದರಾಬಾದ್, ಪುಣೆಗಳಂತಹ ನಗರಗಳಿಗೆ ಹೋಟೆಲ್‌ಗಳಲ್ಲಿ ಜೀತಕ್ಕೆ ಹೋಗಬೇಕಾದ ಸ್ಥಿತಿ, ಕೆಮ್ಮುತ್ತಾ ವಾರವಿಡೀ ಬೀಡಿ ಕಟ್ಟಿದರೂ 200 ರೂಪಾಯಿ ಸಿಗುವುದೇ ಕಷ್ಟವಾಗಿದೆ. ಗೇರು ಫ್ಯಾಕ್ಟರಿಗಳಲ್ಲಿ ಕೈಸುಟ್ಟುಕೊಳ್ಳುತ್ತಾ ವಾರವಿಡೀ ದುಡಿದರೂ ದುಡಿಮೆಗೆ ತಕ್ಕ ಕೂಲಿಯಿಲ್ಲ, ರಕ್ಷಣೆ ಸೌಲತ್ತುಗಳಿಲ್ಲ, ನಗರ ಸೌಂದರ್ಯ ವೃದ್ಧಿ, ರಸ್ತೆ ಅಗಲೀಕರಣ ಮಾಡಲಾಗುವ ಹೆಸರಿನಲ್ಲಿ ಸಣ್ಣಪುಟ್ಟ ವ್ಯಾಪಾರಸ್ಥರು, ಚಿಲ್ಲರೆ ವ್ಯಾಪಾರಿಗಳನ್ನು ನಾಶ ಮಾಡುತ್ತಾ ಮಾಲ್ ಮಲ್ಟಿಪ್ಲೆಕ್ಸ್‌ಗಳಿಗೆ ರತ್ನಗಂಬಳಿ ಹಾಕಿ ಸ್ವಾಗತಿಸಿ ಸಾವಿರಾರು ಕೋಟಿ ರೂಪಾಯಿಗಳ ತೆರಿಗೆ ರಿಯಾಯಿತಿ ನೀಡಿ ಪ್ರೋತ್ಸಾಹಿಸುತ್ತಿರುವ ಆಳುವ ವರ್ಗಗಳು ಇನ್ನೂ ಇರುವ ಅನಾಗರಿಕ ಅಸ್ಪೃಶ್ಯತೆ, ಜಾತೀಯತೆ, ಮಹಿಳಾ ಅಸಮಾನತೆ, ಶೋಷಣೆ ದೌರ್ಜನ್ಯ ದಬ್ಬಾಳಿಕೆಗಳು, ನಮ್ಮ ನಾಡಿನ ಹಾಗೂ ಬದುಕಿಗೇ ವಿನಾಶಕಾರಿಯಾಗಿರುವ ಸಮಸ್ಯೆಗಳ ಬಗ್ಗೆ ವಿದ್ಯಾರ್ಥಿ ಯುವಜನರು ಚಿಂತನ ಮಂಥನ ನಡೆಸದಂತೆ ತಡೆಯಲು ನಡೆಯುತ್ತಿರುವ ಊಳಿಗಮಾನ್ಯ ಕೋಮುವಾದಿ, ಫ್ಯಾಸಿಸ್ಟ್ ಹಾಗೂ ಸಾಮ್ರಾಜ್ಯಶಾಹಿ ಸಾಂಸ್ಕೃತಿಕ ದಾಳಿಗಳು, ಜನರಿಗೆ ಇರಬೇಕಾಗಿರುವ ಪ್ರಜಾತಾಂತ್ರಿಕ ಹಕ್ಕುಗಳ ನಿರಾಕರಣೆ, ಆಳುವ ವರ್ಗಗಳ ಹಂತಕ ಪಡೆಯಾದ ಪೊಲೀಸರ ಹೆಚ್ಚುತ್ತಿರುವ ಚಿತ್ರಹಿಂಸೆ, ದೌರ್ಜನ್ಯ, ಲೂಟಿ ಎನ್‌ಕೌಂಟರುಗಳೆಂಬ ಕಗ್ಗೊಲೆಗಳು, ದುಬಾರಿಯಾಗುತ್ತಿರುವ ಶಿಕ್ಷಣದಿಂದಾಗಿ ವಿದ್ಯಾಭ್ಯಾಸದಿಂದಲೇ ಹೊರಗುಳಿಯಬೇಕಾದ ಸ್ಥಿತಿ, ಇರುವ ಭೂಮಿ ಹೋಳುಹೋಳಾಗಿ ಅತಂತ್ರ ಸ್ಥಿತಿಗೆ ತಳ್ಳಲ್ಪಡುತ್ತಿರುವುದು, ಆಟೋ ಡ್ರೈವರ್‌ಗಳು, ಬಸ್ ಕಂಡಕ್ಟರ್-ಡ್ರೈವರ್‌ಗಳು ಹಗಲಿರುಳು ದುಡಿದರೂ 'ಹೊಟ್ಟೆಗಿದ್ದರೆ ಬಟ್ಟೆಗಿಲ್ಲ' ಎಂಬ ಪರಿಸ್ಥಿತಿ, ರೈತರು ಬೆವರು ಸುರಿಸಿ ಕಷ್ಟಪಟ್ಟು ಬೆಳೆ ಬೆಳೆದರೂ ನ್ಯಾಯಯುತ ಬೆಲೆ ಇಲ್ಲ.

ದಿನೇದಿನೇ ಸಾಲದ ಬೆಟ್ಟದಿಂದಾಗಿ ಪ್ರಾಣವನ್ನೇ ತೊರೆಯಬೇಕಾದ ಸ್ಥಿತಿ ಜನರದೇ ಸರ್ಕಾರ ಎಂದು ಹೇಳಿಕೊಳ್ಳುತ್ತಿದ್ದರೂ ಆಳುವ ಜನಗಳ ಸೇವೆಯೇ ಅವುಗಳ ಗುರಿಯಾಗಿದೆ. ಇದೀಗ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಪರಿಣಾಮವಾಗಿ ಕಂಪೆನಿಗಳು ಬ್ಯಾಂಕುಗಳು ದಿವಾಳಿಯೆದ್ದು ಕೋಟ್ಯಾಂತರ ಜನರು ಬೀದಿಗೆ ಬೀಳುತ್ತಿದ್ದಾರೆ. ಮಾಹಿತಿ ತಂತ್ರಜ್ಞಾನ, ಗಾರ್ಮೆಂಟ್ಸ್, ರಿಯಲ್ ಎಸ್ಟೇಟ್ ಹೀಗೆ ಎಲ್ಲವೂ ನೆಲಕಚ್ಚುವ ಪರಿಸ್ಥಿತಿ ಬಂದಿದೆ. ಸಂಬಳ ಸವಲತ್ತುಗಳ ಕಡಿತ, ಕೆಲಸದಿಂದ ಕಿತ್ತೆಸೆಯುತ್ತಿರುವುದು

ಸಾಮಾನ್ಯವಾಗಿಬಿಟ್ಟಿದೆ ...... ಹೀಗೆ ಹಲವು ತರಹದ ಕಿತ್ತು ತಿನ್ನುವ ಸಮಸ್ಯೆಗಳು ನಮ್ಮನ್ನು ಪ್ರತಿ ಕ್ಷಣವೂ ಕಾಡುತ್ತಿವೆ. ನಮ್ಮ ಈ ಯಾವುದೇ ಸಮಸ್ಯೆಗಳನ್ನು ನಮ್ಮನ್ನಾಳುವ ಸರ್ಕಾರಗಳು ಬಗೆಹರಿಸಲಾರದಾಗಿವೆ. ಆಳುವ ವರ್ಗಗಳ ಸೇವೆ ಮಾಡುತ್ತಾ ಅವರ ಹಿತರಕ್ಷಣೆಗಾಗಿಯೇ ಈ ಸರ್ಕಾರಗಳು ಹಾಗೂ ಬಿ.ಜೆ.ಪಿ, ಕಾಂಗ್ರೆಸ್, ಜನತಾದಳ ಮೊದಲಾದ ಚುನಾವಣಾ ರಾಜಕೀಯ ಪಕ್ಷಗಳು ಟೊಂಕ ಕಟ್ಟಿ ನಿಂತಿವೆ.

ಇಂತಹ ಹಲವು ಜೀವ ಹಿಂಡುವ ಸಮಸ್ಯೆಗಳಿಗೆ ಈಡಾಗಿರುವ ಜನರನ್ನು ದಾರಿತಪ್ಪಿಸಿ ಶೋಷಕರಿಗೆ ಅನುಕೂಲ ಮಾಡಿಕೊಡಲು ಆರ್.ಎಸ್.ಎಸ್, ಭಜರಂಗದಳ, ಶ್ರೀರಾಮ ಸೇನೆ, ಹಿಂದೂ ಜಾಗರಣ ವೇದಿಕೆ, ವಿಶ್ವ ಹಿಂದೂ ಪರಿಷತ್, ಎ.ಬಿ.ವಿ.ಪಿ.ಯಂತಹ ಹಿಂದೂ ಫ್ಯಾಸಿಸ್ಟ್ ಸಂಘಟನೆಗಳ ನಾಯಕರುಗಳು ನಿರಂತರವಾಗಿ ಪ್ರಯತ್ನಿಸುತ್ತಾ ಬರುತ್ತಿದ್ದಾರೆ. ಸಮಸ್ಯೆಗಳಿಂದ ಬಾಧೆ ಪಡುತ್ತಿರುವ ಜನರು ಒಗ್ಗಟ್ಟಾಗದಂತೆ ತಡೆಯಲು ಜಾತಿ, ಧರ್ಮಗಳನ್ನು ಬಳಸುತ್ತಾ ಗಲಭೆ ಎಬ್ಬಿಸುತ್ತಿದ್ದಾರೆ. ದೇವರ ಮೇಲಿನ, ಧರ್ಮದ ಮೇಲಿನ ಜನರ ನಂಬಿಕೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಾ ವಿಕೃತಗೊಳಿಸಿ ಪರಸ್ಪರ ಎತ್ತಿಕಟ್ಟಿ ಕಚ್ಚಾಡಿ ಸಾಯುವಂತೆ ಮಾಡುತ್ತಿದ್ದಾರೆ. ಹಳೆಯ ಶೋಷಕ ಊಳಿಗಮಾನ್ಯ ಚಿಂತನೆಗಳಾದ ಹಿಂದೂ ಸನಾತನ ಧರ್ಮ, ಮಹಿಳಾ ಸ್ವಾತಂತ್ರ್ಯಹರಣ, ಜಾತೀಯತೆ, ಅಸ್ಪೃಶ್ಯತೆ ಇತ್ಯಾದಿಗಳನ್ನು ಜನರ ಮೇಲೆ ಬಲವಂತದಿಂದ ಹೇರಲು ಪ್ರಯತ್ನಿಸುತ್ತಿದ್ದಾರೆ. ಶೋಷಣೆಗೊಳಗಾದ ಜನರು ಹೋರಾಟಕ್ಕಿಳಿಯದಂತೆ ತಡೆಯಲು ಫ್ಯಾಸಿಸ್ಟ್ ದಾಳಿಗಳನ್ನು ನಡೆಸುತ್ತಾ ದಾಂಧಲೆ ಎಬ್ಬಿಸಿ ಭಯಭೀತಿಗೊಳಿಸಿ ತಮ್ಮ ಹಿಡಿತ ಸಾಧಿಸಲು ನೋಡುತ್ತಿದ್ದಾರೆ. ಕರ್ನಾಟಕದಲ್ಲಿ ಅಧಿಕಾರ ತೆಗೆದುಕೊಂಡಿರುವ ಹಿಂದೂ ಫ್ಯಾಸಿಸ್ಟ್ ಬಿಜೆಪಿ ಸರ್ಕಾರದ ನೇರ ಬೆಂಬಲದೊಂದಿಗೆ ಈಗ ಇವುಗಳ ಮತ್ತೂ ಹೆಚ್ಚಾಗಿವೆ. ಇದೆಲ್ಲದರ ಭಾಗವೇ ಮುಸ್ಲಿಂ ಅಲ್ಪಸಂಖ್ಯಾತರ ಮೇಲಿನ ದಾಳಿ, ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲಿನ ದಾಳಿ, ದಲಿತರ ಮೇಲಿನ ದಾಳಿ, ಪ್ರಜಾತಾಂತ್ರಿಕ ವ್ಯಕ್ತಿಗಳು ಹಾಗೂ ಸಂಘಟನೆಗಳ ಮೇಲಿನ ದಾಳಿ, ಪತ್ರಿಕಾ ಸ್ವಾತಂತ್ರ್ಯದ ಮೇಲಿನ ದಾಳಿ ಪತ್ರಕರ್ತರುಗಳ ಮೇಲಿನ ದಾಳಿ ಹೆಚ್ಚಾಗುತ್ತಿರುವುದು ಇವೆಲ್ಲಾ ಹೇಯ, ಮನುಷ್ಯ ವಿರೋಧಿ ಹಾಗೂ ಸಮಾಜ ವಿರೋಧಿ ದುಷ್ಟ ಕೃತ್ಯಗಳು ಸಮಾಜದ ಬೆಳವಣಿಗೆಗೆ ತಡೆಯುಂಟುಮಾಡುವ ಕೆಲಸಗಳಾಗಿವೆ. ಆಳುವ ವರ್ಗಗಳ ಶೋಷಣೆಗೆ ಅನುಕೂಲ ಮಾಡುವ ಉದ್ದೇಶವೇ ಇವುಗಳ ಹಿಂದಿರುವುದು.

**ಆತ್ಮೀಯ ದಲಿತ - ಹಿಂದುಳಿದ ಯುವಕ ಯುವತಿಯರೆ,**

ಹಿಂದೂ ಫ್ಯಾಸಿಸ್ಟ್ ಸಂಘಟನೆಗಳ ಪ್ರಭಾವಗಳಿಗೆ ಸರಿಯಾದ ಗ್ರಹಿಕೆ ಇಲ್ಲದೆ ನೀವು ಅದಕ್ಕೀಡಾಗಿದ್ದಲ್ಲಿ ಕೂಡಲೇ ಅವುಗಳಿಂದ ಹೊರಬಂದು ನಿಮ್ಮನ್ನು ಕಿತ್ತು ತಿನ್ನುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಶೋಷಿತ ಜನರೊಂದಿಗೆ ಸೇರಿ ರಾಜಿರಹಿತವಾಗಿ ಹೋರಾಡಲು ತಯಾರಾಗಬೇಕೆಂದು ನಾವು ನಿಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇವೆ. ಮೇಲೆ ಹೇಳಿರುವ ಹಿಂದೂ ಫ್ಯಾಸಿಸ್ಟ್ ಸಂಘಟನೆಗಳ ನಾಯಕರುಗಳು ಸಂಘಟಿಸುವ ಮುಸ್ಲಿಮ್-ಕ್ರಿಶ್ಚಿಯನ್-ದಲಿತ ಹಾಗೂ ಮಹಿಳೆಯರ ಹಾಗೂ ಪ್ರಜಾತಾಂತ್ರಿಕ ಶಕ್ತಿಗಳ ಮೇಲಿನ ದಾಳಿಗಳಲ್ಲಿ ನೀವುಗಳು ಯಾವುದೇ ರೀತಿಯಿಂದಲೂ ಪಾಲ್ಗೊಳ್ಳಬಾರದೆಂದು ಕೋರುತ್ತಿದ್ದೇವೆ. ಅವುಗಳಲ್ಲಿ ನೀವುಗಳು ಪಾಲ್ಗೊಂಡಲ್ಲಿ ಅದು ನಿಮಗೆ ನೀವೇ ಮಾಡಿಕೊಳ್ಳುವ ಆತ್ಮವಂಚನೆ ಹಾಗೂ ನಿಮ್ಮಂತಿರುವ ಶೋಷಿತ ಜನರ ಮೇಲೆ ಮಾಡುವ ದಾಳಿಯಾಗುತ್ತದೆಯೇ ಹೊರತು ಮತ್ತೇನೂ ಆಗುವುದಿಲ್ಲ. ನಿಮ್ಮಲ್ಲಿರುವ ಶೋಷಣೆ ವಿರುದ್ಧದ ಸಿಟ್ಟು, ಆಕ್ರೋಶಗಳನ್ನು ಪ್ರಸಾದ್ ಅತ್ತಾವರ, ಶರಣ್ ಪಂಪ್‌ವೆಲ್, ಭಾರತೀಯ ಜನತಾ ಪಕ್ಷದ ಯುವ ಮೋರ್ಚಾದ (ಮಾಜಿ ಶಾಸಕ) ಸುನೀಲ್ ಕುಮಾರ್‌ನಂತಹ ಸ್ವಾರ್ಥ, ಭ್ರಷ್ಟ, ಲಂಪಟ ಕ್ರೂರ ನಾಯಕರುಗಳು ತಮ್ಮ ಹಿತಾಸಕ್ತಿಗಳಿಗಾಗಿ ಬಳಸಿಕೊಳ್ಳುತ್ತಿದ್ದಾರೆ. ಇವರಿಗೆಲ್ಲಾ ಪ್ರಮೋದ್ ಮುತಾಲಿಕ್, ಪ್ರವೀಣ್‌ಭಾಯಿ ತೊಗಾಡಿಯಾ, ಅಶೋಕ್ ಸಿಂಘಾಲ್, ನರೇಂದ್ರ ಮೋದಿಯಂತಹ ಕ್ರಿಮಿನಲ್‌ಗಳು ಹಾಗೂ ಭೂಮಾಫಿಯಾ, ಶ್ರೀಗಂಧ ಮಾಫಿಯಾ, ಭೂಗತ ಮಾಫಿಯಾಗಳ ನೇರ ಬೆಂಬಲ ಇದೆ. ನಿಮ್ಮನ್ನೆಲ್ಲಾ ಹೊಡೆದಾಟಗಳಿಗೆ ಹಾಗೂ ದಾಳಿಗಳಿಗೆ ಇಳಿಸಿ ಈ ನಾಯಕರುಗಳು ತಮ್ಮ ಹಾಗೂ ಆಳುವ ಶೋಷಕ ವರ್ಗಗಳ ಅನುಕೂಲಗಳನ್ನು ಮಾಡಿಕೊಳ್ಳುತ್ತಿದ್ದಾರೆ. ತಮ್ಮ ಮಾಫಿಯಾ ವ್ಯಾಪಾರ ವಹಿವಾಟುಗಳನ್ನು

ಬೆಳೆಸಿಕೊಳ್ಳುತ್ತಿದ್ದಾರೆ. ಹಿಂದೆ ಅಷ್ಟೇನೂ ಆಸ್ತಿ ಇರದಿದ್ದ ಸಿ.ಟಿ. ರವಿ, ಸುನೀಲ್ ಕುಮಾರ್, ಮಹೇಂದ್ರ ಕುಮಾರ್‌ಗಳಂತಹವರು ಹಿಂದೂ ಧರ್ಮರಕ್ಷಕರ ಸೋಗಿನಲ್ಲಿ ಜನರನ್ನು ಹೊಡೆದಾಟಕ್ಕಿಳಿಸಿ ಇಂದು ಕೋಟ್ಯಾಂತರ ರೂಪಾಯಿ ಅಕ್ರಮ ಆಸ್ತಿ ಮಾಡಿಕೊಂಡು ಕಾರುಗಳಲ್ಲಿ ಓಡಾಡುತ್ತಿದ್ದಾರೆ. ರಾಜಕೀಯ ಅಧಿಕಾರ ಗಳಿಸಿದ್ದಾರೆ. ಇಂತಹ ಕ್ರಿಮಿನಲ್ ನಾಯಕರ ಮಾತಿನಂತೆ ನೀವುಗಳು ನಡೆಸುವ ದಾಳಿಗಳಿಂದಾಗಿ ನಿಮ್ಮವರೇ ಆದ ಸಾವಿರಾರು ಜನರು ಸಂಕಷ್ಟಗಳಿಗೆ ದೂಡಲ್ಪಟ್ಟಿದ್ದಾರೆ, ಹಲವಾರು ಸಾವುಗಳಾಗಿವೆ, ಅಮಾಯಕ ಎಳೆ ತರುಣಿಯರ ಅತ್ಯಾಚಾರ ಅವಮಾನ ಆತ್ಮಹತ್ಯೆಗಳಾಗುತ್ತಿವೆ. ವಿದ್ಯಾರ್ಥಿ ಯುವಜನರು ದುಗುಡ ಗಾಬರಿಯಿಂದ ಇರುವಂತೆ ಮಾಡುತ್ತಿವೆ. ಮಹಿಳೆಯರು ಆತಂಕದಿಂದ ಓಡಾಡುವಂತೆ ಆಗುತ್ತಿದೆ. ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಅಲ್ಪಸಂಖ್ಯಾತ ಯುವಕ ಯುವತಿಯರು ಸದಾ ಆತಂಕದಿಂದ ಇದ್ದು ಸಹಜವಾಗಿ ತಮ್ಮ ಸ್ನೇಹಿತರೊಂದಿಗೆ ಬೆರೆಯದಂತಾಗುತ್ತಿದೆ. ನೀವುಗಳು ಸದಾ ಗಮನದಲ್ಲಿಟ್ಟುಕೊಳ್ಳಬೇಕಿರುವುದೇನೆಂದರೆ ಈ ನಾಡಿನ ಶೋಷಿತ ಜನರ ಸಮಸ್ಯೆಗಳಿಗೆ ಮುಸ್ಲಿಮರಾಗಲಿ, ಕ್ರಿಶ್ಚಿಯನ್ನರಾಗಲಿ ಕಾರಣರಲ್ಲ, ನಮ್ಮೆಲ್ಲರ ಹಾಗೂ ನಮ್ಮ ನಾಡಿನ ಸಮಸ್ಯೆಗಳಿಗೆ ಬಹುರಾಷ್ಟ್ರೀಯ ಕಂಪೆನಿಗಳು, ಸ್ಥಳೀಯ ಟಾಟಾ, ಇನ್ಫೋಸಿಸ್, ಸತ್ಯಂನಂತಹ ದಲ್ಲಾಳಿ ಬಂಡವಾಳಶಾಹಿ ಕಂಪೆನಿಗಳು ಇವರೆಲ್ಲರ ಚಮಚಾಗಿರಿ ಮಾಡುತ್ತಿರುವ ಸ್ಥಳೀಯ ದೊಡ್ಡ ಭೂಮಾಲೀಕರುಗಳು ಹಾಗೂ ಇನ್ನಿತರ ಶಕ್ತಿಗಳು ಹಾಗೂ ಇವರುಗಳ ಸಾಕುನಾಯಿಗಳಾಗಿರುವ ಬಿಜೆಪಿ, ಕಾಂಗ್ರೆಸ್, ಜನತಾ ದಳ ಇತ್ಯಾದಿ ಚುನಾವಣಾ ರಾಜಕೀಯ ಪಕ್ಷಗಳು ಹಾಗೂ ಇವರ ಬೆಂಬಲಕ್ಕಿರುವ ಆರ್.ಎಸ್.ಎಸ್, ಭಜರಂಗದಳ, ಶ್ರೀರಾಮ ಸೇನೆ, ಎಬಿವಿಪಿಯಂತಹ ಶಕ್ತಿಗಳು ಪ್ರಧಾನ ಕಾರಣರಾಗಿದ್ದಾರೆ. ಹಾಗಾಗಿ ಈ ಎಲ್ಲಾ ವಿದೇಶಿ ಹಾಗೂ ಸ್ವದೇಶಿ ಶತೃಗಳ ವಿರುದ್ಧ ರಾಜಿರಹಿತ ಹೋರಾಟದ ಮೂಲಕ ಅವರೆಲ್ಲರ ಹಿಡಿತವನ್ನು ಕೊನೆಗಾಣಿಸಿ ಈ ನಾಡಿಗೆ ಹಾಗೂ ಶೋಷಿತ ಜನರಿಗೆ ನಿಜವಾದ ಸ್ವಾತಂತ್ರ್ಯ ಸಮಾನತೆ ಸಹೋದರತ್ವಗಳನ್ನು ಸಾಕಾರಗೊಳಿಸಬೇಕಾಗಿದೆ. ಆ ಜವಾಬ್ದಾರಿ ನಮ್ಮನಿಮ್ಮೆಲ್ಲರ ಮೇಲಿದೆ. ಕಾ. ಭಗತ್ ಸಿಂಗ್‌ನಂತಹ ಕ್ರಾಂತಿಕಾರಿಗಳ ವಾರಸುದಾರರಾಗಿ ಅವರ ಕ್ರಾಂತಿಕಾರಿ ಆಶಯಗಳನ್ನು ಈಡೇರಿಸಬೇಕಾದುದು ನಮ್ಮೆಲ್ಲರ ಹೊಣೆಗಾರಿಕೆಯಾಗಿದೆ. ಅದೇ ನಮ್ಮ ನಾಡಿನ ಶೋಷಿತ ಜನರಿಗೆ ಹಾಗೂ ನಾಡಿನ ರಕ್ಷಣೆಗೆ ನಾವು ವಹಿಸಬೇಕಾದ ಬಹುಮುಖ್ಯ ಜವಾಬ್ದಾರಿಯಾಗಿದೆ. ಈ ದಿಕ್ಕಿನಲ್ಲಿ ನೀವೆಲ್ಲರೂ ಆಲೋಚಿಸಿ ಶೋಷಿತರ ಹಾಗೂ ಎಲ್ಲಕ್ಕಿಂತಲೂ ಮನುಷ್ಯ ಶ್ರೇಷ್ಠವಾದ ಧರ್ಮದ ಪರವಾಗಿ ನಿಂತು ಹೋರಾಡುತ್ತೀರೆಂದು ನಾವು ಆಶಿಸುತ್ತೇವೆ.

ಸಾಮ್ರಾಜ್ಯಶಾಹಿಗಳನ್ನು, ದಲ್ಲಾಳಿ ಬಂಡವಾಳಿಗರನ್ನು ಹಾಗೂ ಊಳಿಗಮಾನ್ಯ ಭೂಮಾಲೀಕರನ್ನು ಕೊನೆಗಾಣಿಸಿ ಅವರ ಕೆಟ್ಟ ಸಾಂಸ್ಕೃತಿಕ ಮೌಲ್ಯಗಳನ್ನು ಮನವೊಲಿಕೆ, ಅರ್ಥಪಡಿಸುವಿಕೆ ಮೂಲಕ ಕಿತ್ತೆಸೆಯುವ ನಮ್ಮ ಕ್ರಾಂತಿಕಾರಿ ಹೋರಾಟದೊಂದಿಗೆ ಕೈಗೂಡಿಸಬೇಕೆಂದು ಕೇಳಿಕೊಳ್ಳುತ್ತಿದ್ದೇವೆ.

**ಭಜರಂಗದಳ, ಶ್ರೀರಾಮ ಸೇನೆ, ವಿಶ್ವ ಹಿಂದೂ ಪರಿಷತ್, ಹಿಂದೂ ಜಾಗರಣ ವೇದಿಕೆ, ಬಿಜೆಪಿ ನಾಯಕರುಗಳೇ,**

ನೀವುಗಳು ಮುಸ್ಲಿಮ್, ಕ್ರಿಶ್ಚಿಯನ್‌ರು, ದಲಿತರು, ಮಹಿಳೆಯರು ಹಾಗೂ ಪ್ರಜಾತಾಂತ್ರಿಕರ ಮೇಲಿನ ದಾಳಿಗಳು ಹಾಗೂ ಕುತಂತ್ರಗಳನ್ನು ನಿಲ್ಲಿಸದಿದ್ದಲ್ಲಿ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಅದರ ಎಲ್ಲಾ ಹೊಣೆಗಾರರು ನೀವೇ ಆಗಿರುತ್ತೀರಿ. ನಿಮ್ಮ ಮಾಫಿಯಾ ಹಿತಾಸಕ್ತಿಗಳಿಗೆ ಆಳುವ ವರ್ಗದ ಹಿತಾಸಕ್ತಿಗಳಿಗೆ ಶೋಷಿತ ಜನರು, ಅಲ್ಪಸಂಖ್ಯಾತರು, ಮಹಿಳೆಯರು ಹಾಗೂ ಪ್ರಜಾತಾಂತ್ರಿಕ ಶಕ್ತಿಗಳನ್ನು ಬಲಿ ಕೊಡುವ ಕೆಲಸ ಮುಂದುವರಿಸಿದಲ್ಲಿ ನೀವೇ ಬಲಿಯಾಗಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಆಗ ಯಾವುದೇ ಶಕ್ತಿಯೂ ನಿಮ್ಮ ರಕ್ಷಣೆಗೆ ಬರುವುದಿಲ್ಲ ಎಂಬುದನ್ನು ನೆನಪಿನಲ್ಲಿಡಿ. ನಿಮ್ಮನ್ನು ಈಗ ಬಳಸಿಕೊಳ್ಳುತ್ತಿರುವ ಶಕ್ತಿಗಳು ತಮ್ಮ ಕೆಲಸ ಆದ ಮೇಲೆ ನಿಮ್ಮನ್ನೇ ದೂರಕ್ಕೆ ಎಸೆಯುತ್ತವೆ. ಅದಕ್ಕೆ ಸಾಕಷ್ಟು ಉದಾಹರಣೆಗಳಿವೆ. ದಲಿತ ಬಂಗಾರು ಲಕ್ಷ್ಮಣ್, ಹಿಂದುಳಿದ ಕಲ್ಯಾಣ್ ಸಿಂಗ್‌ರಿಂದ ಹಿಡಿದು ಮಹೇಂದ್ರ ಕುಮಾರ್, ಉಮಾಭಾರತಿವರೆಗೆ ಹಲವಾರು ದಲಿತ ಶೂದ್ರ ವ್ಯಕ್ತಿಗಳ ಉದಾಹರಣೆಗಳಿವೆ. ಜನಸಾಮಾನ್ಯರ ಬದುಕುಗಳನ್ನು ಬಲಿಕೊಟ್ಟು ನಿಮ್ಮ ಲೂಟಿಯ ಬೇಳೆ ಬೇಯಿಸುವ ಕೆಲಸ ನಿಲ್ಲಿಸಿ, ಇಲ್ಲದಿದ್ದಲ್ಲಿ ನೀವುಗಳೇ ಬೆಂದುಹೋಗಬೇಕಾಗುತ್ತದೆ. ಜನರು ನಿಮಗೆ ತಕ್ಕ ಪಾಠ ಕಲಿಸಬೇಕಾದ ಅಗತ್ಯ ಉಂಟಾಗುತ್ತದೆ. ಅದಕ್ಕವರು ತಯಾರಾಗುತ್ತಾರೆ. ನಮ್ಮ ಪಕ್ಷ ಅವರೊಂದಿಗೆ ನಿಲ್ಲುತ್ತದೆ.

**ಪ್ರಿಯ ನಾಡ ಜನರೆ,**

ತೀವ್ರವಾಗಿರುವ ಬಂಡವಾಳಶಾಹಿ ಆರ್ಥಿಕ ಬಿಕ್ಕಟ್ಟು ನಮ್ಮೆಲ್ಲರ ಸಮಸ್ಯೆಗಳನ್ನು ತೀವ್ರಗೊಳಿಸಿದೆ. ಸಾಮ್ರಾಜ್ಯಶಾಹಿ ತನ್ನ ಬಿಕ್ಕಟ್ಟನ್ನು ಸರಿಯಾಗಿಸಲು ನಮ್ಮಂತಹ ದೇಶಗಳನ್ನು ಮತ್ತೂ ಮುಕ್ಕತೊಡಗುತ್ತಿದೆ. ಇಂತಹ ಸಮಯದಲ್ಲಿ ಒಗ್ಗಟ್ಟಿನಿಂದ ಹೋರಾಡಬೇಕಾದ ನಮ್ಮನ್ನು ಒಡೆದಾಳಲು ನಡೆಯುತ್ತಿರುವ ಹಿಂದೂ ಫ್ಯಾಸಿಸ್ಟ್ ಹುನ್ನಾರವನ್ನು ಅರ್ಥ ಮಾಡಿಕೊಂಡು, ಅವರು ನಡೆಸುತ್ತಿರುವ ಅಪಾಯಕಾರಿ ಕೆಲಸಗಳನ್ನು ಗ್ರಹಿಸಿ ಈ ನಾಯಕರುಗಳಿಗೆ ಸೂಕ್ತ ಎದಿರೇಟು ನೀಡಿ ಪಾಠ ಕಲಿಸಲು ಎಲ್ಲರೂ ಮುಂದಾಗಬೇಕಾಗಿದೆ. ಅದಕ್ಕಾಗಿ ಸೂಕ್ತ ಸಂಘಟನೆಗಳನ್ನು ರೂಪಿಸಿಕೊಳ್ಳಬೇಕು. ಫ್ಯಾಸಿಸ್ಟ್ ನಾಯಕರುಗಳನ್ನು ಜನರ ಮುಂದೆ ಬಯಲು ಮಾಡುತ್ತಾ ತಕ್ಕ ಎದಿರೇಟನ್ನು ನೀಡಬೇಕು. ಸಂಘ ಪರಿವಾರದ ನಾಯಕರುಗಳ ಕರಾಳ ವ್ಯಕ್ತಿತ್ವ ಹಾಗೂ ಕೃತ್ಯಗಳನ್ನು ಜನರ ಮಧ್ಯೆ ವ್ಯಾಪಕವಾಗಿ ಪ್ರಚಾರಕ್ಕೆ ತೆಗೆದುಕೊಂಡು ಹೋಗಬೇಕು. ಒಗ್ಗಟ್ಟಿಗೆ ತಡೆಯಾಗಿರುವ ಮೂಲಭೂತವಾದದ ವಿರುದ್ಧವೂ ಪ್ರಚಾರ ನಡೆಸಿ ಜನರಲ್ಲಿ ಪ್ರಜ್ಞೆ ಮೂಡಿಸುವ ಕೆಲಸ ಆಗಬೇಕು. ಇದಕ್ಕಾಗಿ ಎಲ್ಲಾ ಜಾತಿ ಮತದ ಜನರು ಒಗ್ಗೂಡಬೇಕು. ಸರ್ಕಾರ, ಪೊಲೀಸ್ ಇಲ್ಲವೇ ನ್ಯಾಯಾಂಗವು ನಮ್ಮ ರಕ್ಷಣೆಗೆ ನಿಲ್ಲುತ್ತದೆಂದು ಕೈಕಟ್ಟಿ ಕುಳಿತರೆ ನೀವುಗಳೇ ವ್ಯರ್ಥವಾಗಿ ಬಲಿಯಾಗಬೇಕಾದ ಸ್ಥಿತಿ ಬರುತ್ತದೆ. ಹಿಂದೂ ಫ್ಯಾಸಿಸ್ಟರ ವಿರುದ್ಧ ಧೈರ್ಯದಿಂದ ಒಗ್ಗೂಡಿ ನಿಂತು ಎದಿರೇಟು ನೀಡಿದಲ್ಲಿ ಮಾತ್ರ ಅವರ ದಾಳಿಗಳನ್ನು ತಡೆಗಟ್ಟಲು ಸಾಧ್ಯ ಎಂಬುದನ್ನು ಮರೆಯಬಾರದು. ಹಿಂದೂ ಫ್ಯಾಸಿಸ್ಟ್ ನಾಯಕರು ಮತ್ತವರ ಹಿಡಿಯಷ್ಟಿರುವ ಹಿಂಬಾಲಕರು ಜೋರಾಗಿ ಅಬ್ಬರಿಸುತ್ತಿದ್ದರೆ ಬಹುಸಂಖ್ಯಾತ ಜನರು ಸುಮ್ಮನೇ ಕುಳಿತಿರುವುದರಿಂದ ಫ್ಯಾಸಿಸ್ಟ್ ದಾಳಿಗಳು ಹೆಚ್ಚಾಗುತ್ತಿವೆ ಎಂಬುದನ್ನು ಗಮನಿಸಬೇಕು. ಬಹುಸಂಖ್ಯಾತ ಜನರು ಒಗ್ಗೂಡಿ ತಿರುಗಿ ಬಿದ್ದರೆ ಫ್ಯಾಸಿಸ್ಟರ ಆಟ ಸಾಗುವುದಿಲ್ಲ. ಕಟ್ಟಾ ಫ್ಯಾಸಿಸ್ಟರಿಗೆ ಅರ್ಥ ಮಾಡಿಸಲು, ಮನವೊಲಿಸಲು ಸಾಧ್ಯವಾಗುವುದಿಲ್ಲ. ಅಂತಹವರಿಗೆ ದೈಹಿಕ ಶುದ್ಧಿಯ ಅಗತ್ಯ ಇರುತ್ತದೆ. ಅಂತಹ ಕಟ್ಟಾ ಫ್ಯಾಸಿಸ್ಟರ ನಿರ್ಮೂಲನೆ ಸೇರಿದಂತೆ ಉಗ್ರ ಕ್ರಮಗಳನ್ನು ಕೈಗೊಳ್ಳಲು ಹಿಂಜರಿಯಬಾರದು. ಕೇವಲ ಸರ್ಕಾರದ ಕಡೆ ನೋಡುವುದರಿಂದ ಇಲ್ಲವೆ ಪ್ರಚಾರ, ಖಂಡನೆಗಳಿಂದ ಮಾತ್ರ ಕಟ್ಟಾ ಫ್ಯಾಸಿಸ್ಟರನ್ನು ಎದುರಿಸಲು ಆಗುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಂಡು ಅವುಗಳ ಜೊತೆಗೆ ನೇರ ಕಾರ್ಯಾಚರಣೆಗೆ ಇಳಿಯಬೇಕಾದ ಅಗತ್ಯ ಇದೆ.

**ಸಿಪಿಐ (ಮಾವೋವಾದಿ) ಪಕ್ಷ ಸದಾ ನಿಮ್ಮೊಂದಿಗೆ ಇರುತ್ತದೆ. ಶೋಷಿತರ, ಪ್ರಗತಿಪರರ, ಪ್ರಜಾತಾಂತ್ರಿಕರ ಹೆಗಲಿಗೆ ಹೆಗಲಾಗಿ ನಿಲ್ಲುತ್ತದೆ.**

- ☆ ಹಿಂದೂ ಫ್ಯಾಸಿಸ್ಟ್ ನಾಯಕರ ಜನವಿರೋಧಿತನಗಳನ್ನು ಬಯಲುಗೊಳಿಸೋಣ!
- ☆ ತಿದ್ದಿಕೊಳ್ಳದ ಕಟ್ಟಾ ಫ್ಯಾಸಿಸ್ಟ್ ನಾಯಕರ ಮೇಲೆ ಕ್ರಮ ತೆಗೆದುಕೊಳ್ಳೋಣ!
- ☆ ದಲಿತರು, ಆದಿವಾಸಿಗಳು, ಮಹಿಳೆಯರು, ಹಿಂದುಳಿದವರು, ಬಡವರು ಮೊದಲಾದ ಶೋಷಿತ ಜನರ ಹಾಗೂ ನಾಡಿನ ರಕ್ಷಣೆಗೆ ಕಟಿಬದ್ಧರಾಗಿ ನಿಲ್ಲೋಣ!
- ☆ ಪ್ರಗತಿಪರ ಹಾಗೂ ಪ್ರಜಾತಾಂತ್ರಿಕ ವ್ಯಕ್ತಿಗಳು ಹಾಗೂ ಸಂಘಟನೆಗಳ ಪರವಾಗಿ ದೃಢವಾಗಿ ನಿಲ್ಲೋಣ!
- ☆ ನವ ಪ್ರಜಾತಾಂತ್ರಿಕ ವ್ಯವಸ್ಥೆಗಾಗಿ ನಡೆಯುತ್ತಿರುವ ಸಶಸ್ತ್ರ ಕ್ರಾಂತಿಕಾರಿ ಹೋರಾಟದಲ್ಲಿ ಪಾಲ್ಗೊಳ್ಳೋಣ!

ಕ್ರಾಂತಿಕಾರಿ ವಂದನೆಗಳೊಂದಿಗೆ,

ಸಿಪಿಐ (ಮಾವೋವಾದಿ)
ದೃಕ್ಪಥ ಪ್ರದೇಶ
ಕರ್ನಾಟಕ

20/02/2009

ಮನವಿ: ನೀವೂ ಓದಿ, ಇತರರಿಗೂ ಓದಿಸಿ